ಮಧುಗಿರಿ ಪ್ರಧಾನ ಸಿವಿಲ್ ಜಡ್ಜ್ ರವರ ಘನ ನ್ಯಾಯಾಲಯದಲ್ಲಿ

ಅಸಲು ದಾವೆ ನಂಬರ್ 436/2021

| ವಾದಿ | ವಿರುದ್ಧ | ಪ್ರತಿವಾದಿ |
|---|---|---|
| ಜಿ.ಎಸ್. ರಾಮಕೃಷ್ಣ | | ಪುಟ್ಟನರಸೇಗೌಡ |

PW2

ಪ್ರಮಾಣ ಪತ್ರದ ರೂಪದಲ್ಲಿ ವಾದಿಯಪರ ಸಾಕ್ಷಿಯ ಮುಖ್ಯವಿಚಾರಣೆ

ಹೆಸರು : ಹನುಮಂತರಾಯಪ್ಪ ~~ಎಸ್.ಟಿ~~ (S-U)
ತಂದೆಯ ಹೆಸರು : ಉಗ್ರನರಸಪ್ಪ ~~ಲೇ.~~
ವಯಸ್ಸು : ಸುಮಾರು ~~71~~ ವರ್ಷ (72 ವರ್ಷ)
ವಿಳಾಸ : ಸಾದರಹಳ್ಳಿ ಗ್ರಾಮ ವಾಸಿ,
ಐ.ಡಿ.ಹಳ್ಳಿ ಹೋಬಳಿ,
ಮಧುಗಿರಿ ತಾಲ್ಲೂಕು

ಆದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಸತ್ಯವಾಗಿ ಹೇಳುವುದೇನೆಂದರೆ:-

ನನಗೆ ವಾದಿ ಮತ್ತು ಪ್ರತಿವಾದಿ ಗೊತ್ತು, ಪ್ರತಿವಾದಿಗೆ ಸೇರಿದ ಕೋಳಿ ಫಾರಂ ನೋಡಿದ್ದೇನೆ. ಸದರಿ ಪ್ರತಿವಾದಿಗೆ ಸೇರಿದ್ದು ಕೋಳಿ ಫಾರಂನ್ನು ಪ್ರತಿವಾದಿ ಪುಟ್ಟನರಸೇಗೌಡ ರವರು ದಿನಾಂಕ 09-12-2020 ರಂದು ಕೋಳಿ ಫಾರಂ ತೀರುವಳಿ ಬೋಗ್ಯ ಪತ್ರವನ್ನು ವಾದಿಗೆ ಬರೆದುಕೊಟ್ಟಿರುತ್ತಾರೆ. ಅಂದು ಪ್ರತಿವಾದಿ ಪುಟ್ಟನರಸೇಗೌಡ ರವರು ವಾದಿ ರಾಮಕೃಷ್ಣ ರವರಿಂದ ರೂ. 2,30,000/-ಗಳನ್ನು ಸಾಕ್ಷಿದಾರರ ಮೊಕ್ತ ಪಡೆದಿರುತ್ತಾರೆ ಹಾಗೂ ಕೋಳಿ ಫಾರಂ ಮತ್ತು ಅದರಲ್ಲಿದ್ದ ಕೋಳಿಸಾಕಾಣಿಕೆ ಸಾಮಗ್ರಿಗಳನ್ನು ವಾದಿಗೆ ಬಿಟ್ಟುಕೊಟ್ಟಿರುತ್ತಾರೆ. ಅದೇ ರೀತಿ ಪ್ರತಿವಾದಿಯಯ ಅದೇ ದಿನ ಕೋಳಿ ಫಾರಂ ಸಾಮಗ್ರಿಗಳ ಬಾಬ್ತು ರೂ. 50,000/-ಗಳನ್ನು ವಾದಿಯಿಂದ ಪಡೆದುಕೊಂಡಿರುತ್ತಾರೆ ಹಾಗೂ ಅವದಿ ಮುಗಿದಾಗ ಸಾಮಾಗ್ರಿಗಳ ಬಾಬ್ತು ಪಡೆದ ಹಣವನ್ನು ವಾದಿಗೆ ವಾಪಸ್ ಕೊಡುವುದಾಗಿ ಪ್ರತಿವಾದಿ ಒಪ್ಪಿಕೊಂಡಿರುತ್ತಾರೆ.

ಸದರಿ ಪತ್ರಕ್ಕೆ ವಾದಿ ಮತ್ತು ಪ್ರತಿವಾದಿಗಳು ಪರಸ್ಪರ ಒಪ್ಪಿ ಸಹಿ ಮಾಡಿರುತ್ತಾರೆ, ನಂತರ ಸಾಕ್ಷಿಗಳಾಗಿ ನಾನು ಮತ್ತು ವೈ.ಡಿ. ರಂಗಶ್ಯಾಮಯ್ಯ, ನಾಗಲಿಂಗಪ್ಪ, ಸಹಿ ಮಾಡಿರುತ್ತೇವೆ. ಸದರಿ ಪತ್ರವನ್ನು ಪತ್ರಬರಹಗಾರ ಬಿಕ್ಕಲಂ ದಾರನಾಗಿ ಸಹಿ ಮಾಡಿರುತ್ತಾರೆ. ನಾನು ಅವರ ಸಹಿಗಳನ್ನು ನೋಡಿದರೆ ಗುರ್ತಿಸುತ್ತೇನೆ.

ಮೇಲ್ಕಂಡ ಎಲ್ಲಾ ಅಂಶಗಳು ಸತ್ಯವಾಗಿದ ಎಂದು ತಿಳಿದು ನಾನು ಸಹಿ ಮಾಡಿರುತ್ತೇನೆ.

ಗುರುತುಬಲ್ಲವರು

Gangadharaiah
G.K.M.S

ವಕೀಲರು
ಮಧುಗಿರಿ
ದಿನಾಂಕ: ~~(01-06-2026)~~
01-06-26

S. Hanumanthappa

ಪ್ರಮಾಣ ಮಾಡುವವರು

ನನ್ನ ಮುಂದೆ ಪ್ರಮಾಣೀಕರಿಸಿದೆ
Mamata 1/6/2026
ಶಿರಸ್ತೇದಾರರು
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಮಧುಗಿರಿ.

No. of correction Four

ಓ.ಎಸ್.436/2021
ಪಿ.ಡಬ್ಲ್ಯೂ-2

ದಿನಾಂಕಃ **01.06.2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜೆ.ಆರ್.ಎಂ. ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ಸರಿ ಇರುತ್ತದೆಂದು ಎಂದು ಒಪ್ಪಿ ಸಹಿ ಮಾಡಿರುತ್ತೇನೆ.

ಸಾಕ್ಷಿಯು ನಿಪಿ-1 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಅದೇ ರೀತಿಯಾಗಿ ಸಾಕ್ಷಿಯು ಇನ್ನೊಬ್ಬರು ಸಾಕ್ಷಿದಾರರಾದ ವೈ.ಡಿ ರಂಗಸಾಮಯ್ಯ ಮತ್ತು ನಾಗಲಿಂಗಪ್ಪರವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ ಸದರಿ ಸಹಿಗಳನ್ನು ಕ್ರಮವಾಗಿ ನಿಪಿ1 ಬಿ ಮತ್ತು ನಿಪಿ-1 ಸಿ ಎಂದು ಗುರುತಿಸಲಾಯಿತು. ಅದೇ ರೀತಿಯಾಗಿ ಸಾಕ್ಷಿ ನಿಪಿ-1 ರಲ್ಲಿನ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪ್ರತಿವಾದಿಯ ಎರಡು ಸಹಿಗಳನ್ನು ಒಟ್ಟಾರೆಯಾಗಿ ನಿಪಿ-1 ಡಿ ಎಂದು ಗುರುತಿಸಲಾಯಿತು. ಅದೇ ರೀತಿಯಾಗಿ ಸಾಕ್ಷಿಯು ನಿಪಿ-1 ರಲ್ಲಿನ ವಾದಿಯ ಎರಡು ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ-1 ಇ ಎಂದು ಗುರುತಿಸಲಾಯಿತು. ಅದೇ ರೀತಿಯಾಗಿ ಸಾಕ್ಷಿಯು ಪತ್ರ ಬರಹಗಾರರಾದ ವೀರನಾಗಪ್ಪರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಒಟ್ಟಾರೆಯಾಗಿ ನಿಪಿ-1 ಎಫ್ ಎಂದು ಗುರುತಿಸಲಾಯಿತು.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

01/6/2026

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ